ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೩ Part – III	ಬೆಂಗಳೂರು, ಗುರುವಾರ, ೦೪, ಜೂನ್, ೨೦೨೬ (ಜ್ಯೇಷ್ಠ, ೧೪, ಶಕವರ್ಷ, ೧೯೪೮) BENGALURU, THURSDAY, 04, JUNE, 2026 (JYAISTHA , 14, SHAKAVARSHA, 1948)	ನಂ. ೪೩೫ No. 435

ಕರ್ನಾಟಕ ಸರ್ಕಾರ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ
ನಂ.204, 2ನೇ ಮಹಡಿ, 3ನೇ ಗೇಟ್,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001

ಸಂಖ್ಯೆ: ಕಪಂರಾಸೀನಿಆ/82/ಪ್ರಾ.ಗ.ನಿ/2023 **ದಿನಾಂಕ:03-06-2026**

ಪ್ರಕಟಣೆ

ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ ತಾಲ್ಲೂಕುಗಳ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.

ಕಂದಾಯ ಇಲಾಖೆಯು, ಬಾಗಲಕೋಟೆ ಜಿಲ್ಲೆಯ, ರಬಕವಿ ಬನಹಟ್ಟಿ ತಾಲ್ಲೂಕಿನ ಹಿಪ್ಪರಗಿ ಗ್ರಾಮವನ್ನು ಜಮಖಂಡಿ ತಾಲ್ಲೂಕಿಗೆ ಸೇರ್ಪಡೆಗೊಳಿಸಿ, ಅಧಿಸೂಚನೆ ಸಂಖ್ಯೆ:RD 89 LRD 2023, ದಿನಾಂಕ:14.06.2024ರಲ್ಲಿ ಅಧಿಸೂಚನೆ ಹೊರಡಿಸಿರುತ್ತದೆ ಹಾಗೂ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ/187/ಎಂಎಲ್ ಆರ್/2021(e), ದಿನಾಂಕ:02.12.2023 ರಲ್ಲಿ ಶಿರೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಿಂದ ನೀಲಾನಗರ ತಾಂಡಾ/ಗ್ರಾಮವನ್ನು ಬೇರ್ಪಡಿಸಿ ಅಧಿಸೂಚನೆ ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ **ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ ತಾಲ್ಲೂಕುಗಳ** ಜನಸಂಖ್ಯೆಯಲ್ಲಿ ಬದಲಾವಣೆಯಾಗುವುದರಿಂದ, ಸರ್ಕಾರವು, ದಿನಾಂಕ:16.12.2023ರ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚಿಸಿದ್ದ **ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ** ತಾಲ್ಲೂಕುಗಳ ಜಿಲ್ಲಾ ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು, ಅಧಿಸೂಚನೆ ಸಂಖ್ಯೆ:RDPR 2 ZPS 2026, ದಿನಾಂಕ:12.05.2026ರಲ್ಲಿ ಹಿಂಪಡೆದು ಆದೇಶಿಸಿದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು **ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ** ತಾಲ್ಲೂಕುಗಳ ಜಿಲ್ಲಾ ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಯನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 160, 161 ಮತ್ತು 163ರ ಅನ್ವಯ ಹಾಗೂ 308(ಇ)(ಎಫ್)ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು **ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ** ತಾಲ್ಲೂಕುಗಳ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. **'ಅ'** ಕೋಷ್ಟಕದ **2ನೇ** ಅಂಕಣದಲ್ಲಿರುವ ತಾಲ್ಲೂಕಿನಿಂದ

ಆಯ್ಕೆಯಾಗುವ ಜಿಲ್ಲಾ ಪಂಚಾಯತಿ ಸದಸ್ಯರುಗಳ ಸಂಖ್ಯೆಯನ್ನು **3ನೇ** ಅಂಕಣದಲ್ಲಿ ನಿಗದಿಪಡಿಸಿದೆ.

ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ ತಾಲ್ಲೂಕುಗಳ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು ಅನುಕ್ರಮವಾಗಿ 3, 6 ಮತ್ತು 5 ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಟಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **ಆ'** ಕೋಷ್ಟಕದ **3ನೇ** ಅಂಕಣದಲ್ಲಿ ಪ್ರತಿಯೊಂದು ಜಿಲ್ಲಾ ಪಂಚಾಯತ್ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ **4ನೇ** ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ ತಾಲ್ಲೂಕುಗಳ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ **7 (ಏಳು) ದಿವಸಗಳ ಒಳಗಾಗಿ ಅಂದರೆ ದಿನಾಂಕ:09-06-2026, ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

(ಅ) ಆನ್ ಲೈನ್ ಮೂಲಕ:

ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/" ಸದರಿ ವೆಬ್‌ಸೈಟ್ ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

(ಆ) ಖುದ್ದಾಗಿ/ಅಂಚೆ ಮೂಲಕ:

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಕೋಷ್ಟಕ "ಅ"

ಬಾಗಲಕೋಟೆ ಜಿಲ್ಲೆ		
ಕ್ರ. ಸಂ.	**ತಾಲ್ಲೂಕಿನ ಹೆಸರು**	**ಜಿಲ್ಲಾ ಪಂಚಾಯತಿಯ ಸದಸ್ಯರ ಸಂಖ್ಯೆ**
1	2	3
1.	ರಬಕವಿ-ಬನಹಟ್ಟಿ	3
2.	ಜಮಖಂಡಿ	6
3.	ಬಾಗಲಕೋಟೆ	5
ಒಟ್ಟು		14

ಕೋಷ್ಟಕ "ಅ"

ಬಾಗಲಕೋಟೆ ಜಿಲ್ಲೆ			
ಕ್ರ ಸಂ	**ತಾಲ್ಲೂಕಿನ ಹೆಸರು**	**ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು**	**ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು**
1	2	3	4
1	**ರಬಕವಿ-ಬನಹಟ್ಟಿ**	**2-ಚಿಮ್ಮಡ**	ಚಿಮ್ಮಡ, ಜಗದಾಳ, ಆಸಂಗಿ, ಮದನಮಟ್ಟಿ.
2	ರಬಕವಿ-ಬನಹಟ್ಟಿ	**3-ಸೈದಾಪೂರ**	ಸೈದಾಪೂರ, ಮಧಬಾವಿ, ಮಾರಾಪೂರ, ಸಂಗಾನಟ್ಟಿ, ನಂದಗಾಂವ, ಡವಳೇಶ್ವರ, ಕೆಸರಕೊಪ್ಪ, ಬಿಸನಾಳ.
3	ರಬಕವಿ-ಬನಹಟ್ಟಿ	**4-ಕುಲಹಳ್ಳಿ**	ಕುಲಹಳ್ಳಿ, ನಾವಲಗಿ, ಯಲ್ಲಟ್ಟಿ, ಬಂಡಿಗಣಿ.
4	**ಜಮಖಂಡಿ**	**5-ಹುನ್ನೂರ**	ಹುನ್ನೂರ, ಕಡಪಟ್ಟಿ, ಹಂಚಿನಾಳ, ಸಿದ್ನಾಪೂರ, ಮದರಖಂಡಿ, ಕಲಹಳ್ಳಿ, ಹಿಪ್ಪರಗಿ.
5	ಜಮಖಂಡಿ	**6-ಆಲಗೂರ**	ಆಲಗೂರ, ಮೈಗೂರ, ಶಿರಗುಪ್ಪಿ, ಮುತ್ತೂರ, ಆಲಬಾಳ, ಕಂಕಣವಾಡಿ, ಕಡಕೋಳ, ಕುಂಬಾರಹಳ್ಳ, ಸನಾಳ.
6	ಜಮಖಂಡಿ	**7-ಸಾವಳಗಿ**	ಸಾವಳಗಿ, ಅಡಿಹುಡಿ, ಜಂಬಗಿ ಬಿ.ಕೆ, ಟಕ್ಕೋಡ, ಟಕ್ಕಳಕಿ, ತುಂಗಳ, ಶೂರಪಾಲಿ, ತುಬಚಿ, ಜಂಬಗಿ ಕೆ ಡಿ.
7	ಜಮಖಂಡಿ	**8-ತೊದಲಬಾಗಿ**	ತೊದಲಬಾಗಿ, ಕನ್ನೋಳ್ಳಿ, ಕುರಗೋಡ, ಗದ್ಯಾಳ, ಖಾಜಿಬೀಳಗಿ, ಗೋಠೆ, ಕಲಬೀಳಗಿ.
8	ಜಮಖಂಡಿ	**9-ಕೊಣ್ಣೂರ**	ಕುಂಚನೂರ, ಜಕನೂರ, ಚಿನಗುಂಡಿ, ಲಿಂಗನೂರ, ಗಣಿ, ಬುದ್ನಿ, ಕೊಣ್ಣೂರ, ಮರೇಗುದ್ದಿ, ಹುಲ್ಯಾಳ, ಹುಣಶಿಕಟ್ಟಿ.
9	ಜಮಖಂಡಿ	**10-ಹಿರೇಪಡಸಲಗಿ**	ಹಿರೇಪಸಲಗಿ, ನಾಗನೂರ, ಬಿದರಿ, ಚಿಕ್ಕಲಕಿ, ಜನವಾಡ, ಚಿಕ್ಕಪಡಸಲಗಿ, ಕವಟಗಿ.
10	**ಬಾಗಲಕೋಟೆ**	**20-ಕಲಾದಗಿ**	ಖಜ್ಜಿಡೋಣಿ, ಅಂಕಲಗಿ, ಉದಗಟ್ಟಿ, ಉದಗಟ್ಟಿ ಪುಕೇ, ಶಾರದಾಳ, ಕಲಾದಗಿ, ಕಲಾದಗಿ ಪುಕೇ, ಚಿಕ್ಕಶೆಲ್ಲಿಕೇರಿ, ಹಿರೇಶೆಲ್ಲಿಕೇರಿ, ಕಳಸಕೊಪ್ಪ, ಗೋವಿಂದಕೊಪ್ಪ, ತುಳಸೀಗೇರಿ, ದೇವನಾಳ, ಹಿರೇಸಂಶಿ, ಚಿಕ್ಕಸಂಶಿ, ಸೊಕನಾದಗಿ.
11	ಬಾಗಲಕೋಟೆ	**21-ಗದ್ದನಕೇರಿ**	ಗದ್ದನಕೇರಿ, ಯಡಹಳ್ಳಿ, ಛಬ್ಬಿ, ಛಬ್ಬಿ ಪುಕೇ, ಆನದಿನ್ನಿ, ಬನ್ನಿದಿನ್ನಿ, ದುರ್ಗಾನಗರ (ಗದ್ದನಕೇರಿ ಎಲ್ ಟಿ), ಸೀಮಿಕೇರಿ, ಮುರನಾಳ, ವೀರಾಪೂರ, ಕೇಸನೂರ, ಸಿಂದಗಿ (ಪು.ಕೇಂದ್ರ), ನಕ್ಕರಗುಂದಿ (ಪು.ಕೇಂದ್ರ), ಸಾಳಗುಂದಿ (ಪು.ಕೇಂದ್ರ), ಸಿದ್ನಾಳ (ಪು.ಕೇಂದ್ರ), ಕದಾಂಪೂರ, ಯಂಕಂಚಿ ಯಂಕಂಚಿ ಪುಕೇ, ಅಂಡಮುರನಾಳ, ಸಿದ್ನಾಳ, ಹೊನರಳ್ಳಿ, ಸೊರಕೊಪ್ಪ, ಸಿಂದಗಿ, ಸಾಳಗುಂದಿ, ನಕ್ಕರಗುಂದಿ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಬಾಗಲಕೋಟೆ ಜಿಲ್ಲೆ			
ಕ್ರ ಸಂ	ತಾಲ್ಲೂಕಿನ ಹೆಸರು	ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು
1	2	3	4
12	ಬಾಗಲಕೋಟೆ	**22- ಬೇವಿನಮಟ್ಟಿ**	ಬೇವಿನಮಟ್ಟಿ, ಬೇವಿನಮಟ್ಟಿ ಪುಕೇ, ನೀಲಾನಗರ, ನೀರಲಕೇರಿ, ಮುಚಖಂಡಿ, ದುರ್ಗಾದೇವಿನಗರ, ಬೆನಕಟ್ಟಿ, ಮನ್ನಿಕಟ್ಟಿ, ಇಂಗಳಗಿ, ಭಗವತಿ, ಕಿರಸೂರ, ಮುಗಳೊಳ್ಳಿ, ಹೊನ್ನಾಕಟ್ಟಿ, ಮುಗಳೊಳ್ಳಿ ಪುಕೇ, ಮುಗಳೊಳ್ಳಿ ತಾಂಡಾ-1, ಮುಗಳೊಳ್ಳಿ ತಾಂಡಾ-2, ಸಂಗೊಂದಿ, ಶೀಗೀಕೇರಿ, ಶೀಗೀಕೇರಿ ಪುಕೇ, ಮಲ್ಲಾಪೂರ.
13	ಬಾಗಲಕೋಟೆ	**23- ಬೇವೂರ**	ಬೇವೂರ, ಚೌಡಾಪೂರ, ಹಳ್ಳೂರ, ಬೈರಮಟ್ಟಿ, ತಿಮ್ಮಾಪೂರ, ಬೋಡನಾಯಕದಿನ್ನಿ, ಬಿಲ್ ಕೆರೂರ, ಅಚನೂರ, ಸಂಗಾಪೂರ, ಬೆಣ್ಣೂರ, ಬೆಣ್ಣೂರ ಪುಕೇ, ಶಿರಗುಪ್ಪಿ, ಶಿರಗುಪ್ಪಿ ಪುಕೇ, ತಳಗಿಹಾಳ, ಇಲಾಳ, ಕಡ್ಲಿಮಟ್ಟಿ, ಜಡ್ಡಾಮಕುಂಟಿ, ಜಡ್ಡಾಮಕುಂಟಿ ಪುಕೇ, ಲವಳೇಶ್ವರ ತಾಂಡಾ, ಮುಡಪಲಜೀವಿ, ಬಸವನಗರ.
14	ಬಾಗಲಕೋಟೆ	**24- ರಾಂಪೂರ**	ರಾಂಪೂರ, ರಾಂಪೂರ ಪುಕೇ, ಸೀತಿಮನಿ ಆರ್.ಎಸ್, ಮಾಸ್ತಿಹಾಳ, ಆಲೂರ, ಹಿರೇಗುಳಬಾಳ, ಚಿಕ್ಕಗುಳಬಾಳ, ಮುತ್ತತ್ತಿ, ಹಿರೇಮೂರಮಟ್ಟಿ, ಚಿಕ್ಕಮೂರಮಟ್ಟಿ, ಹಿರೇಹೊದ್ಲೂರ, ಚಿಕ್ಕಹೊದ್ಲೂರ, ಧರ್ಮನಗರ (ಅಲೂರ ತಾಂಡಾ), ನಾಯನೇಗಲಿ, ಮುದುವಿನಕೊಪ್ಪ, ಚಿಟಗಿನಕೊಪ್ಪ, ದೇವಲಾಪೂರ, ಹೊಸೂರ, ನಾಗರಾಳ, ನಾಗಸಂಪಗಿ, ಸೀತಿಮನಿ, ಚಿಕ್ಕಸೀತಿಮನಿ, ಮನಹಳ್ಳಿ, ಸುತಗುಂಡಾರ, ಡೋಮನಾಳ, ಮಂಕಣಿ, ಚಿಕ್ಕಮ್ಯಾಗೇರಿ, ಹಿರೇಮ್ಯಾಗೇರಿ, ಬೊಮ್ಮಣಗಿ, ಹಂಡರಗಲ್ಲ.

ವಿಶೇಷ ಸೂಚನೆ:-

ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ ತಾಲ್ಲೂಕುಗಳ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:09-06-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:11-06-2026 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:204, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.

(ಕೆ.ಹೆಚ್.ಕೃಷ್ಣಮೂರ್ತಿ)
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH